**PW-2 , CW-2**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ
ನ್ಯಾಯಾಲಯ, ಮಡಿಕೇರಿ

ಸಿ ಸಿ ನಂಃ **11/2022**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಸುಂದರ್ ಪಿ.ಹೆಚ್. | ಪಿ.ಡಬ್ಲ್ಯೂ | 2 |
| ತಂದೆಯ ಹೆಸರು | : | ಐತಪ್ಪ | ಸಿ.ಡಬ್ಲ್ಯೂ | 2 |
| ವಯಸ್ಸು | : | 47 ವರ್ಷ | ದಿನಾಂಕ | 25-07-2024 |
| ಉದ್ಯೋಗ | : | ಕೂಲಿ | | |
| ವಾಸಸ್ಥಳ | : | ಸುಂಟಿಕೊಪ್ಪ | | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ಚಾಸಾ-1 ನನ್ನ ಮಗ. ಚಾಸಾ-3 ಮತ್ತು 4 ನನಗೆ ಗೊತ್ತು. ಆರೋಪಿತರು ಸಹಾ ನನಗೆ ಗೊತ್ತು.

ಈ ಪ್ರಕರಣದ ಯಾವ ವಿಚಾರಗಳು ನನಗೆ ಗೊತಿಲ್ಲ, ಆರೋಪಿತರು ಮತ್ತು ಚಾಸಾ-**1** ರ ನಡುವೆ ಯಾವುದೇ ಗಲಾಟೆ ನಡೆದಿಲ್ಲ, ಆರೋಪಿತರು ದೊಣ್ಣೆಯಿಂದ ಮತ್ತು ಕೈಯಿಂದ ಚಾಸಾ-**1** ರವರಿಗೆ ಯಾವುದೇ ಹಲ್ಲೆ ಮಾಡಿಲ್ಲ, ನಾನು ಯಾವುದೇ ಗಲಾಟೆಯನ್ನು ಬಿಡಿಸಿಲ್ಲ.

ಈ ಸಂಬಂಧ ತನಿಖಾಧಿಕಾರಿಗಳಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ**

ದಿಃ 12-09-2021 ರಂದು ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಗಳಿಗೆ ನನ್ನ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ದಿಃ 10-

09–2021 ರಂದು ಸಂಃ 6–30 ರ ಸಮಯದಲ್ಲಿ ನಾವು ಗಣಪತಿ ವಿಸರ್ಜಿಸಿ ಸಂಜೆ 7–30 ರ ಸಮಯದಲ್ಲಿ ನಮ್ಮ ಊರಿನ ಸಮುದಾಯ ಭವನದ ಬಳಿ ನಾವು ನಿಂತಿದ್ದಾಗ ಆರೋಪಿತರು ಅಲ್ಲಿಗೆ ಬಂದು ಚಾಸಾ–1 ರ ಜೊತೆ ವಿನಾ ಕಾರಣ ಜಗಳ ತೆಗೆದಿರುತ್ತಾರೆ, 2 ಮತ್ತು 3 ನೇ ಆರೋಪಿತರು ಕೈಯಿಂದ ಚಾಸಾ––1 ರ ತುಟಿ ಮತ್ತು ಕುತ್ತಿಗೆಯ ಭಾಗಕ್ಕೆ ಹೊಡೆದು ಹಲ್ಲೆ ಮಾಡಿರುತ್ತಾರೆ, 1 ನೇ ಆರೋಪಿತ ಅಲ್ಲಿಯೇ ಬಿದ್ದಿದ್ದ ಒಂದು ದೊಣ್ಣೆಯಿಂದ ಚಾಸಾ–1 ರ ಬೆನ್ನು ಮತ್ತು ತೊಡೆಗೆ ಹೊಡೆದಿರುತ್ತಾನೆ ಎಂದು ನನ್ನ ಹೇಳಿಕೆಯಲ್ಲಿ ತಿಳಿಸಿದ್ದೇನೆ ಎಂದರೆ ಸರಿಯಲ್ಲ, ಅಲ್ಲಿಯೇ ಇದ್ದ ನಾನು ಕೂಡಲೇ ಅಲ್ಲಿಗೆ ತೆರಳಿ ಗಲಾಟೆ ಬಿಡಿಸಿ, ಚಾಸಾ–1 ರವರನ್ನು ಉಪಚರಿಸಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇನೆ, ಆರೋಪಿತರ ವಿರುದ್ದ ಪ್ರಕರಣ ದಾಖಲಾಗಿರುವ ವಿಚಾರ ನನಗೆ ಗೊತ್ತು ನನ್ನ ಹೇಳಿಕೆಯಲ್ಲಿ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ತನ್ನ ಹೇಳಿಕೆಯನ್ನು ಓದಿ ಹೇಳಲಾಗಿ ಸಾಕ್ಷಿಯು ಅದನ್ನು ಅಲ್ಲಗಳೆದಿದ್ದು, ಸಾಕ್ಷಿಯ ಹೇಳಿಕೆಯನ್ನು ನಿಪಿ–**4** ಎಂದು ಗುರುತಿಸಲಾಯಿತು.

ನಾವು ಮತ್ತು ಆರೋಪಿತರು ಈಗ ರಾಜೀ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆದ್ದರಿಂದ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನನಗೆ ನಿಪಿ–**4** ರ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡಲು ಆರೋಪಿತರು ಮತ್ತು ಚಾಸಾ–**1** ರ ನಡುವೆ ಯಾವುದೇ ಗಲಾಟೆ ನಡೆದಿಲ್ಲ, ಆರೋಪಿತರು ಕೈಯಿಂದ ಮತ್ತು ದೊಣ್ಣೆಯಿಂದ ಚಾಸಾ–**1** ರವರಿಗೆ ಯಾವುದೇ ಹಲ್ಲೆ ಮಾಡಿಲ್ಲ, ನಾನು ಯಾವುದೇ ಗಲಾಟೆಯನ್ನು ಬಿಡಿಸಿಲ್ಲ ಈ ಸಂಬಂಧ ನಾನು ನಿಪಿ–**4** ರಂತೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**PW-2 , CW-2**

**<u>ಪಾಟೀ ಸವಾಲು: ಆರೋಪಿತರ ಪರವಾಗಿ : ಇರುವುದಿಲ್ಲ</u>**

**<u>ಮರು ವಿಚಾರಣೆ :ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚುಪಡಿಸಿದೆ)

ಓ.ಹೇ.ಕೇ. ಸರಿ ಇದೆ.
ಸಹಿ/–***
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಮಡಿಕೇರಿ.